## 'ನಗು' ಎಂಬ ಹೂವು

ಎರಡನೇ ತರಗತಿಯಲ್ಲಿ ಪಾಠ ಮಾಡುತ್ತಿದ್ದ ಶಿಕ್ಷಕಿ, 'ಮಕ್ಕಳಾ... ನಿಮಗೆ ಹೂಗಳ ಹೆಸರು ಗೊತ್ತಾ? ಒಬ್ಬೊಬ್ಬರೇ ನಿಂತು ನಿಮಗೆ ಗೊತ್ತಿರೋ ಒಂದು ಹೂವಿನ ಹೆಸರು ಹೇಳಿ' ಎಂದು ಹೇಳಿದರು. ಒಬ್ಬೊಬ್ಬರು ಎದ್ದು ನಿಂತು ತಮಗೆ ತೋಚಿದ ಹೂವಿನ ಹೆಸರು ಹೇಳಿದರು. ಆಗ ಧನ್ಯಳ ಸರದಿ ಬಂತು. 'ನಗು' ಎಂದು ಉತ್ತರಿಸಿದಳು. ಶಿಕ್ಷಕಿ, 'ಯಾಕೆ ಧನ್ಯಾ.. ನಾನು ಕೇಳಿದ ಪ್ರಶ್ನೆ ಅರ್ಥ ಆಗ್ಲಿಲ್ವಾ?' ಎಂದು ಕೇಳಿದರು. 'ಅರ್ಥವಾಯ್ತು ಮಿಸ್, ನಮ್ಮಮ್ಮ 'ನಗು' ಎಂಬ ಹೂವು ಎಲ್ಲಕ್ಕಿಂತ ಹೆಚ್ಚು ಸುಂದರ ಅಂತ ಹೇಳುತ್ತಿರುತ್ತಾರೆ' ಎಂದು ಉತ್ತರಿಸಿದಳು. ಇಡೀ ತರಗತಿ ಸ್ತಬ್ಧವಾಗಿತ್ತು.

**ಅರವಿಂದ ಜಿ. ಜೋಷಿ**





## ತಪ್ಪು ಹುಡುಕಬೇಡಿ

ಬಹಳ ದಿನಗಳ ನಂತರ ಅಪ್ಪ ಮಗಳನ್ನು ನೋಡಲು ಅವಳ ಮನೆಗೆ ಬಂದಿದ್ದ. ಮಾತುಕತೆಯ ನಂತರ ಮಗಳು ಅಪ್ಪನಿಗೆ ಊಟ ಬಡಿಸಿದಳು. ಊಟ ಮಾಡುತ್ತ, 'ಪಲ್ಯ ಪರವಾಗಿಲ್ಲ, ಸುಮಾರಾಗಿ ಕಲಿತಾಗಿದೆ. ಆದರೆ, ಸಾಂಬಾರಿನಲ್ಲಿ ಉಪ್ಪಿಲ್ಲ, ಹುಳಿ ಇಲ್ಲ... ಸಪ್ಪೆ ಸಪ್ಪೆ...' ಎಂದರು. ಮಗಳು ಸಿಟ್ಟಿನಿಂದ, 'ಅಪ್ಪ, ಸುಮ್ನೆ ಊಟ ಮಾಡಿ, ಹಾಗೆಲ್ಲ ನಿಮ್ಮ ಅಳಿಯನ ಕೆಲಸ ಕಾರ್ಯಗಳಲ್ಲಿ ತಪ್ಪು ಹುಡುಕಬೇಡಿ' ಎಂದಾಗ ಅಪ್ಪ ತಬ್ಬಿಬ್ಬಾದ!

**ವಿ. ವಿಜಯೇಂದ್ರ ರಾವ್**